SINDHI HIGH SCHOOL, BENGALURU

PRE BOARD- III EXAMINATION [2025-26]

SUBJECT- L2 KANNADA

Date: 19-01-2026 **ANSWER KEY** **Marks: 80**

Class: X

PART - A (40 ಅಂಕಗಳು)

ವಿಭಾಗ- ಎ

ವಾಚನ ಮತ್ತು ಗ್ರಹಿಕಾ ಕೌಶಲ: 20 ಅಂಕಗಳು

1. ಕೆಳಗಿನ ಗದ್ಯಾಂಶವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. **5X1=5**

I. B) ಇಕ್ಕೇರಿ II. A) ಶ್ರೀರಂಗರಾಯ-1 III. D) ಇದೊಂದು ಬಿತ್ತನೆ ಸಾಮರ್ಥ್ಯದ ಘಟ

IV. C) ಮೊದಲಿನ ಹೇಳಿಕೆಯು ಮಾತ್ರ ಸರಿಯಾಗಿದೆ. V. A)ಚಂದ್ರಗಿರಿ, ಬೇಕಲ್, ಅಡ್ಕ ಕೋಟೆ, ಆರಿಕ್ಕಾಡಿ

2. ಕೆಳಗಿನ ಗದ್ಯಾಂಶವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. **5X1=5**

I. A) ಕಲೆಗಾಗಿ ಕಲೆ II. D) ಅಲಂಕಾರ III. C) ಭಾವನೆ

IV. B) ಬೆಂಕಿಯ ಉಪಯೋಗ ಕಂಡುಹಿಡಿದದ್ದು V. B) ನವೀನ

3. ಈ ಕೆಳಗೆ ಕೊಟ್ಟಿರುವ ಡಿ. ಎಸ್. ಜಯಪ್ಪಗೌಡ ಅವರ 'ಭಾಗ್ಯಶಿಲ್ಪಿಗಳು' ಪಠ್ಯದಲ್ಲಿನ ಪರಿಚಿತಗದ್ಯವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. **5X1=5**

I. ವಿಶ್ವೇಶ್ವರಯ್ಯ ಅವರು ದಿವಾನರಾಗಿದ್ದ ಸಿ. ರಂಗಚಾರ್ಲುರವರಿಂದ ವಿದ್ಯಾರ್ಥಿವೇತನ ಪಡೆದರು.

II. ವಿಶ್ವೇಶ್ವರಯ್ಯ ಅವರ ಮನೆತನದ ಪೂರ್ವಜರು ಆಂಧ್ರಪ್ರದೇಶದಿಂದ ಬಂದು ಚಿಕ್ಕಬಳ್ಳಾಪುರ ಸಮೀಪದಲ್ಲಿರುವ ಮುದ್ದೇನಹಳ್ಳಿಯಲ್ಲಿ ನೆಲೆಸಿದರು.

III. ವಿಶ್ವೇಶ್ವರಯ್ಯ ಅವರ ಮಾತಾಪಿತರು ಶ್ರೀನಿವಾಸಶಾಸ್ತ್ರಿ ಮತ್ತು ವೆಂಕಟಲಕ್ಷ್ಮಮ್ಮ.

IV. ವಿಶ್ವೇಶ್ವರಯ್ಯ ಅವರ ಬಗ್ಗೆ ನೆಹರೂ ಅವರ ಮನದಾಳದ ಮಾತುಗಳು- "ದುರದೃಷ್ಟವಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರದವರೆಂಬ

ದೂಷಣೆಗೆ ಒಳಗಾಗಿದ್ದೇವೆ. ತಾವು ಈ ಮಾತಿಗೆ ಬಹು ದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ. ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ. ಅದನ್ನು ನಾವು ತಮ್ಮಿಂದ ಕಲಿಯೋಣ"

V. ವಿಶ್ವೇಶ್ವರಯ್ಯ ಅವರು ಪೂನಾದ ಎಂಜಿನಿಯರಿಂಗ್ ಕಾಲೇಜಿನಲ್ಲಿ ಡಿಪ್ಲೊಮಾ ಶಿಕ್ಷಣವನ್ನು ಪ್ರಥಮ ಸ್ಥಾನದಲ್ಲಿ ಪಡೆದು ಜೇಮ್ಸ್ ಬರ್ಕ್ಸ್ ಬಹುಮಾನಕ್ಕೂ ಪಾತ್ರರಾದರು.

4. ಈ ಕೆಳಗೆ ಕೊಟ್ಟಿರುವ ಕುವೆಂಪು ಅವರು ರಚಿಸಿರುವ 'ಹಸುರು' ಪರಿಚಿತ ಪದ್ಯಭಾಗವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 5X1=5

I. ಕವಿಗೆ ಆಗಸ, ಮುಗಿಲು, ಗದ್ದೆಯಾ ಬಯಲು, ಮಲೆ, ಕಣಿವೆ ಹಾಗೂ ಸಂಜೆಯ ಬಿಸಿಲು ಹಸುರಾಗಿ ಕಾಣುತ್ತಿದೆ.

II. ಕವಿಯು ನೋಡಿದ ಅಡಕೆಯ ತೋಟ ಬನದ ಅಂಚಲಿ ಇದೆ.

III. ಕವಿಗೆ ಹಸುರು ಹುಲ್ಲು ಜಮಖಾನೆಯಂತೆ ಕಾಣುತ್ತಿದೆ.

IV. ಆಶ್ವಯುಜ ಮಾಸದಲ್ಲಿ ಕವಿಗೆ ಭತ್ತದ ಗದ್ದೆಯು ಗಿಳಿಯ ಬಣ್ಣದಂತೆ ಕಾಣುತ್ತಿದೆ.

V. ಹಸುರೇ ಇಳೆಯ ಉಸಿರು.

ವಿಭಾಗ-ಬಿ

ಅನ್ವಯಿಕ ವ್ಯಾಕರಣ ಮತ್ತು ಪಠ್ಯಪೂರಕ ಅಧ್ಯಯನ- 20ಅಂಕಗಳು

5. ಕೆಳಗಿನ ಪ್ರತಿಯೊಂದು ಬಹುಆಯ್ಕೆಯ ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ. 10X1=10

I. A) ಚಂದ್ರಾನನೆ-ಲೋಪಸಂಧಿ II. B) ಸಂಖ್ಯೆಯವಾಚಕ III. A) ಪಂಚಮೀ

IV. C) ಸಾಕು V. B) ಬೇಸಗೆ VI. D) 1 ಮತ್ತು 4 VII. C) ಮುಖ

VIII. A) ಸೂರ್ಯ- ಆಕಾಶ IX. C) ಮಿರಮಿರ X. (A) ಮೊತ್ತಮೊದಲು

6. ಕೆಳಗಿನವುಗಳನ್ನು ಸೂಚನೆಯಂತೆ ಬರೆಯಿರಿ. 5X1=5

I. ಕಕ್ಕಾಬಿಕ್ಕಿ- ಈ ಪದವನ್ನು ಬಳಸಿ ಸ್ವಂತ ವಾಕ್ಯವನ್ನು ರಚಿಸುವರು.

II. 'ಹಂಪೆಯಲ್ಲಿನ ದೇವಾಲಯಗಳನ್ನು ನೋಡಿಕೊಂಡು ಬರಲಿ'. ಈ ವಾಕ್ಯದ ವಿದ್ಯರ್ಥಕ ರೂಪ.

III. ಈ ಕೆಳಗಿನ ಗಾದೆಯ ಮಾತಿನ ಅರ್ಥವನ್ನು ಬರೆಯಿರಿ.
ಕಷ್ಟ ಪಟ್ಟು ದುಡಿದರೆ ಫಲ ಸಿಗುವುದು.

ಅಥವಾ

ಯಾವುದೇ ಕೆಲಸವಾದರೂ ಹೆಚ್ಚು ಸಮಯ ಹಾಗೂ ಶ್ರಮ ಬೇಕಾಗುವುದು, ಆದರೆ ಅದನ್ನು ನಾಶ ಮಾಡುವುದು ಸುಲಭ.

IV. 'ಮೈಸೂರು ವಿಶ್ವವಿದ್ಯಾಲಯವು ವಿಶ್ವೇಶ್ವರಯ್ಯ ಅವರಿಂದ ಸ್ಥಾಪಿಸಲ್ಪಟ್ಟಿತು.' ಈ ವಾಕ್ಯವನ್ನು ಕರ್ಮಣಿ ಪ್ರಯೋಗ ಬರೆಯಿರಿ.

V. ಮಹೇಶ ಮತ್ತು ರಮ್ಯ ಇಬ್ಬರೂ ಊರಿಗೆ ಹೋದರು- ಈ ವಾಕ್ಯವನ್ನು ಗ್ರಾಂಥಿಕ ರೂಪದಲ್ಲಿ ಬರೆಯಿರಿ.

7. ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ. 5X1=5

I. A) ಸ್ವಾತಂತ್ರ್ಯ ನನ್ನ ಆ ಜನ್ಮಸಿದ್ಧ ಹಕ್ಕು II. B) ಎಪ್ರಿಲ್ ೧೩, ೧೯೧೯
III. D) ಕ್ರಿಯಾ IV. B) ವಸಂತ V. C) ಬೆಣ್ಣೆ

ಭಾಗ –B (40 ಅಂಕಗಳು)

ವಿಭಾಗ – ಸಿ (ಬರವಣಿಗೆ ಕೌಶಲ್ಯ 12 ಅಂಕಗಳು)

8. ಪತ್ರಲೇಖನ (1x4=4)

ಮನವಿ ಪತ್ರ ಅಥವಾ ಉದ್ಯೋಗವಕಾಶ ಅರ್ಜಿ

ಇಂದ- ½ ಇಂದ-½

ಇವರಿಗೆ-½ ಇವರಿಗೆ-½

ಮಾನ್ಯರೇ, ದಿನಾಂಕ,ಸ್ಥಳ-½ ಮಾನ್ಯರೇ, ದಿನಾಂಕ, ಸ್ಥಳ-½

ವಿಷಯ-½ ವಿಷಯ /ಉಲ್ಲೇಖ-½

ಪತ್ರದ ಒಡಲು-1½ ಪತ್ರದ ಒಡಲು-ಸ್ವವಿವರ-1½

ಮುಕ್ತಾಯ, ಸಹಿ-½ ಮುಕ್ತಾಯ, ಸಹಿ-½

9. ವರದಿ ತಯಾರಿಕೆ.(1x4=4)

ಶೀರ್ಷಿಕೆ-½

ದಿನಾಂಕ-½, ಸ್ಥಳ-½

ವಿಷಯ ವಿವರಣೆ-2

ವರದಿಗಾರರ ರುಜು-½

10.ಪ್ರಬಂಧ ರಚನೆ. (1x4=4)

ಪೀಠಿಕೆ-1

ವಿಷಯ ವಿವರಣೆ-2

ಮುಕ್ತಾಯ/ ಉಪಸಂಹಾರ-½

ಭಾಷಾಶೈಲಿ-½

ವಿಭಾಗ-ಡಿ (ಪಠ್ಯಗಳ ಅಧ್ಯಯನ) 28 ಅಂಕಗಳು

11. ಈ ಕೆಳಗಿನ ಪ್ರಶ್ನೆಗಳಿಗೆ 2-3 ವಾಕ್ಯಗಳಲ್ಲಿ ಉತ್ತರಿಸಿ:- (4x2=8)

I. ಒಂದು ಬಾರಿ ಶಾನುಭೋಗರು ಇರಸಾಲಿಗಾಗಿ ಚಿಕ್ಕನಾಯಕನ ಹಳ್ಳಿಗೆ ಹೋಗಿದ್ದರು. ಖಜಾನೆಗೆ ಹಣ ಕಟ್ಟಿ , ಸ್ನೇಹಿತರನ್ನು ನೋಡಿಕೊಂಡು ಅಲ್ಲಿಂದ ವಾಪಾಸ್ಸು ಹೊರಡುವ ವೇಳೆಗೆ ಸಂಜೆ ಆರು ಘಂಟೆಯಾಗಿತ್ತು. ಶಾನುಭೋಗರು ಮದಲಿಂಗನ ಕಣಿವೆಯನ್ನು ದಾಟಿ ಹೋಗಬೇಕಾಗಿತ್ತು.ಅದು ಕಾಡುದಾರಿಯಾಗಿತ್ತು. ಆ ದಿನ ಬೆಳದಿಂಗಳಿನ ರಾತ್ರಿ ಆದರೂ ಶಾನುಭೋಗರ ಮನಸ್ಸಿನಲ್ಲಿ ಭಯ

ಆವರಿಸಿತ್ತು. ಹೊಟ್ಟೆಯೂ ಹಸಿಯುತ್ತಿತ್ತು. "ಸ್ವಲ್ಪ ದೊಡ್ಡ ಹೆಜ್ಜೆ ಹಾಕಿ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು" ಎಂದು ಅವರು ಯೋಚಿಸಿದರು.

II. ಮನುಷ್ಯ-ಮನುಷ್ಯರ ನಡುವಿನ ಸಂಬಂಧಗಳು ನಾಶವಾಗುತ್ತಿವೆ. ನಾಶವಾಗುತ್ತಿರುವ ಸಂಬಂಧಗಳನ್ನು ಗಟ್ಟಿಗೊಳಿಸಿ, ಪ್ರೀತಿ, ವಿಶ್ವಾಸ, ನಂಬಿಕೆಗಳಿಂದ ಕೂಡಿದ ಹೊಸ ಭರವಸೆಗಳನ್ನು ಮೂಡಿಸಬೇಕಾಗಿದೆ. ಈ ಮೂಲಕ ಮನುಷ್ಯರ ನಡುವಿನ ಅಡ್ಡ ಗೋಡೆಗಳನ್ನು ತೆಗೆದು ಹಾಕಿ ಉತ್ತಮ ಸಂಬಂಧದ ಸೇತುವೆಯನ್ನು ನಿರ್ಮಿಸಬೇಕಾಗಿದೆ.

III. ಈ ಲೋಕದಲ್ಲಿ ಜ್ಞಾನಿಗಳು ಮತ್ತು ಅಜ್ಞಾನಿಗಳು ಎಂಬ ಎರಡು ವರ್ಗಗಳಿವೆ. ಅಜ್ಞಾನಿಗಳ

ಸ್ನೇಹವ ಮಾಡಿದರೆ ಆ ಸ್ನೇಹವು ಕಲ್ಲನ್ನು ಹೊಡೆದು ಕಿಡಿಯನ್ನು ಹೊತ್ತಿಸಿಕೊಂಡಂತೆ ಆಗುತ್ತದೆ.

ಹೊತ್ತಿಕೊಂಡ ಕಿಡಿ ಎಲ್ಲವನ್ನು ಸುಡುತ್ತದೆಯೇ ವಿನಃ ಅದು ರಕ್ಷಣೆ ನೀಡಲಾರದು. ಜ್ಞಾನಿಗಳ ಸ್ನೇಹವನ್ನು ಮಾಡಿದರೆ ಆ ಸ್ನೇಹವು ಮೊಸರನ್ನು ಹೊಸೆದು ಬೆಣ್ಣೆಯನ್ನು ತೆಗೆದುಕೊಂಡಂತೆ ಆಗುತ್ತದೆ. ಮೊಸರು ಹಲವು ಪ್ರಕ್ರಿಯೆಗಳನ್ನು ದಾಟಿ ತುಪ್ಪವಾಗಿ ಪರಿವರ್ತಿತವಾಗುವಂತೆ ಶರಣ ಸಂಗವೆಂಬ ಪ್ರಕ್ರಿಯೆಯಿಂದ ಮನುಷ್ಯನು ತನ್ನೆಲ್ಲ ನ್ಯೂನ್ಯತೆಗಳನ್ನು ಕಳೆದುಕೊಂಡು ಪರಿವರ್ತನೆಯನ್ನು ಹೊಂದುವಂತೆ ಅರಿತವರ ಸಂಗವು ಆಗುತ್ತದೆ.

IV. ಅಂದವಾದ ಬರವಣಿಗೆ ಉತ್ತಮ ಶಿಕ್ಷಣದ ಅವಶ್ಯವಾದ ಅಂಶವೆಂಬುದನ್ನು ಪ್ರತಿಯೊಬ್ಬ ಯುವಕರೂ, ಯುವತಿಯರೂ ತಿಳಿದುಕೊಳ್ಳಲಿ.' ಎಂಬ ಅಭಿಪ್ರಾಯ ಹೊಂದಿದ ಗಾಂಧೀಜಿಯವರು 'ಕೆಟ್ಟ ಅಕ್ಷರದ ಬರವಣಿಗೆ ಅಪಕ್ವ ಮತ್ತು ಅಪೂರ್ಣ ಶಿಕ್ಷಣದ ಚಿಹ್ನೆ 'ಎನ್ನುವುದನ್ನು ಇಂಗ್ಲೆಂಡಿಗೆ ಹೋದ ನಂತರ ಅರಿತುಕೊಂಡರು.

12. ಈ ಕೆಳಗಿನ ಪ್ರಶ್ನೆಗಳಿಗೆ 5-6 ವಾಕ್ಯಗಳಲ್ಲಿ ಉತ್ತರಿಸಿ:- **(2x3=6)**

I. ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ಕ್ರಿಯೆಯಲ್ಲಿ ಮೂಡಿದ ತಿಳುವಳಿಕೆಯಾಗಿದೆ. ಅದು ತರ್ಕವಲ್ಲ. ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವಾಗುತ್ತದೆ. ತನ್ನಷ್ಟಕ್ಕೆ ತಾನು ಇರುವ ಕೇವಲ ತಿಳುವಳಿಕೆ ಮತು ಜ್ಞಾನ ಅರಿವಾಗುವುದಿಲ್ಲ. ಅದನ್ನು ಕೇಳಿ ತಿಳಿಯಲು ಸಾಧ್ಯವಿಲ್ಲ.

II. ಕರ್ಣನು ಕೃಷ್ಣನಿಗೆ " ನಾನು ರಾಜ್ಯದ ಸಿರಿ ಸಂಪತ್ತಿಗೆ ಸೋಲುವವನಲ್ಲ. ಪಾಂಡವರು, ಕೌರವರು ನನಗೆ ಸೇವೆಯನ್ನು ಮಾಡುವುದು ಇಷ್ಟವಿಲ್ಲ. ಆದರೆ ನನ್ನನ್ನು ಕಾಪಾಡಿದ ಒಡೆಯನಾದ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ತಂದು ಒಪ್ಪಿಸುವ ಉತ್ಸಾಹದಲ್ಲಿ ದ್ದೆನು.ಆದರೆ ನೀನು ನನ್ನ ಜನ್ಮ ರಹಸ್ಯವನ್ನು ತಿಳಿಸಿ ದುರ್ಯೋಧನನನ್ನು ಕೊಂದೆ" ಎಂದು ಹೇಳಿದನು.

13. ಈ ಕೆಳಗಿನ ಸಂದರ್ಭವನ್ನು ಸ್ವಾರಸ್ಯದೊಡನೆ ವಿವರಿಸಿ :- **(2x3=6)**

I. ಈ ವಾಕ್ಯವನ್ನು ಸಮಿತಿ ರಚನೆಯ 'ಭಾಗ್ಯಶಿಲ್ಪಿಗಳು' ಎಂಬ ಗದ್ಯ ಭಾಗದ 'ನಾಲ್ವಡಿ ಕೃಷ್ಣರಾಜ ಒಡೆಯರು' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಲೇಖಕರು ಓದುಗರಿಗೆ ಹೇಳಿದ್ದಾರೆ.

ಸಂದರ್ಭ: ನಾಲ್ವಡಿ ಕೃಷ್ಣರಾಜ ಒಡೆಯರು ಅವರು ಸ್ಥಳೀಯ ಸಂಸ್ಥೆಗಳನ್ನು ರಚಿಸಿ ಆಡಳಿತ ವಿಕೇಂದ್ರೀಕರಣಕ್ಕೆ ಅನುವು ಮಾಡಿಕೊಟ್ಟು ಮೈಸೂರು ಸಂಸ್ಥಾನವನ್ನು ಮಾದರಿ ಸಂಸ್ಥಾವನ್ನಾಗಿ ರೂಪಿಸಿದರು ಎಂದು ಹೇಳುವಾಗ ಈ ಮೇಲಿನ ವಾಕ್ಯ ಬಂದಿದೆ.

ಸ್ವಾರಸ್ಯ: ಮಾದರಿ ಮೈಸೂರು ರಾಜ್ಯದ ನಿರ್ಮಾಣದ ಹಿಂದಿನ ರೂವಾರಿ ನಾಲ್ವಡಿ ಕೃಷ್ಣರಾಜ ಒಡೆಯರು ಎನ್ನುವುದು ಇಲ್ಲಿ ವ್ಯಕ್ತವಾಗಿದೆ.

ಅಥವಾ

ಆಯ್ಕೆ: ಈ ವಾಕ್ಯವನ್ನು ಪು.ತಿ. ನರಸಿಂಹಾಚಾರ್ ಅವರು ರಚಿಸಿರುವ 'ಶಬರಿ ' ಎಂಬ ಗೀತನಾಟಕದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಈ ಮಾತನ್ನು ರಾಮನು ಶಬರಿಗೆ ಕೇಳಿದನು. ದನುವಿನ ಸೂಚನೆಯಂತೆ ಸೀತೆಯನ್ನು ಹುಡುಕುತ್ತಾ ರಾಮಲಕ್ಷ್ಮಣರು ಮತಾಂಗಶ್ರಮವನ್ನು ಪ್ರವೇಶಿಸುತ್ತಾರೆ. ಅಲ್ಲಿ ರಾಮನ ದರ್ಶನದ ನಿರೀಕ್ಷೆಯಲ್ಲಿದ್ದ ಶಬರಿಯನ್ನು ಕಂಡ ರಾಮನು ಈ ಮೇಲಿನ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ : ಸೀತೆಯನ್ನು ಹುಡುಕುತ್ತಾ ಕಾಡುಮೇಡುಗಳಲ್ಲಿ ಅಲೆಯುತ್ತಿದ್ದ ರಾಮಲಕ್ಷ್ಮಣರಿಗೆ ವಿಶ್ರಾಂತಿಯ ಅವಶ್ಯಕತೆಯಿತ್ತು ಎನ್ನುವುದು ಇಲ್ಲಿ ಸ್ವಾರಸ್ಯಪೂರ್ಣವಾಗಿದೆ.

II ಆಯ್ಕೆ: ಈ ಮೇಲಿನ ವಾಕ್ಯವನ್ನು ಲಕ್ಷ್ಮೀಶ ಕವಿಯು ಬರೆದ 'ವೀರಲವ' ಎಂಬ ಪದ್ಯದಿಂದ ತೆಗೆದುಕೊಳ್ಳಲಾಗಿದೆ.

ಸಂದರ್ಭ: ವೀರಲವನು ಶ್ರೀರಾಮನ ಅಹಂಕಾರವನ್ನು ಇಳಿಸಬೇಕೆಂದು ತನ್ನ ಉತ್ತರೀಯದಿಂದ ಯಜ್ಞಾಶ್ವವನ್ನು ಬಾಳೆಯ ಗಿಡಕ್ಕೆ ಕಟ್ಟಿಹಾಕಿದನು. ಆಗ ಮುನಿಸುತರು 'ಇದು ರಾಜರ ಕುದುರೆ ಇದನ್ನು ಬಿಟ್ಟುಬಿಡು' ಎಂದು ಹೇಳಿದ ಸಂದರ್ಭದಲ್ಲಿ ಈ ಮೇಲಿನ ವಾಕ್ಯ ಬಂದಿದೆ.

ಸ್ವಾರಸ್ಯ: ಸೀತೆಯ ಮಗನಾದ ಲವನ ವೀರತೆ ಈ ಮೇಲಿನ ಮಾತುಗಳ ಮೂಲಕ ಸ್ವಾರಸ್ಯ ಪೂರ್ಣವಾಗಿ ವ್ಯಕ್ತವಾಗಿದೆ.

ಅಥವಾ

ಆಯ್ಕೆ: ಈ ಮೇಲಿನ ವಾಕ್ಯವನ್ನು ಬಿ.ಎಸ್.ಗದ್ದಗಿಮಠ ಅವರು ಸಂಪಾದಿಸಿರುವ 'ಹಲಗಲಿ ಬೇಡರು' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ೧೮೫೭ ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಅನಂತರ ಭಾರತೀಯರ ಮೇಲೆ ಬ್ರಿಟಿಷ್ ಕಂಪನಿ ಸರ್ಕಾರಕ್ಕೆ 'ಸರ್ಕಾರದ ಅನುಮತಿಯಿಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಇಟ್ಟುಕೊಳ್ಳುವಂತಿಲ್ಲ. ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು.' ಎಂಬ ಆದೇಶವನ್ನು ಹೊರಡಿಸಿದ ಸಂದರ್ಭದಲ್ಲಿ ಈ ಮೇಲಿನ ವಾಕ್ಯ ಬಂದಿದೆ.

ಸ್ವಾರಸ್ಯ: ಭಾರತೀಯರ ಮೇಲಿನ ಬ್ರಿಟಿಷರ ದರ್ಪ ಇಲ್ಲಿ ವ್ಯಕ್ತವಾಗಿದೆ.

14. ಈ ಕೆಳಗಿನ ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರಿಸಿ:- **(1x4=4)**

I. ಸೈನ್ಯದಲ್ಲಿ ವೈದ್ಯನಾಗಿದ್ದ ರಾಹಿಲನು ಯುದ್ಧದಲ್ಲಿ ಗಾಯಗೊಂಡು ಮುದುಕಿಯ ಮನೆಗೆ ಬಂದಾಗ ಅವಳ ಸೊಸೆ ಹೆರಿಗೆ ನೋವಿನಿಂದ ನರಳುತ್ತಿದ್ದಳು. ಆ ಹೊತ್ತಿನಲ್ಲಿ ಆಕೆಯನ್ನು ಆಸ್ಪತ್ರೆಗೆ ಕರೆದೊಯ್ಯುವುದು ಸಾಧ್ಯವಿರಲಿಲ್ಲ. ಆಗ ರಾಹಿಲನು ಬಿಸಿ ನೀರನ್ನು ತರಿಸಿ ಆಕೆಯನ್ನು ಪರೀಕ್ಷಿಸಿದನು. ನಂತರ ಬಹಳ ಹೊತ್ತಿನ ಪ್ರಯತ್ನದ ಬಳಿಕ ಮಗುವನ್ನು ಹೊರತೆಗೆದನು. ಆದರೆ ಆ ಮಗು ನಿರ್ಜೀವವಾಗಿತ್ತು. ಮುದುಕಿಯ ಸೊಸೆಯನ್ನು ಉಳಿಸಿದನು. ಹೀಗೆ ರಾಹಿಲನು ಮುದುಕಿಯ ಕುಟುಂಬಕ್ಕೆ ಸಹಾಯ ಮಾಡಿದನು.

ಮುದುಕಿಗೆ ರಾಹಿಲನು ಶತ್ರುಗಳ ಕಡೆಯವನಿರಬಹುದೆಂಬ ಸಂದೇಹ ಉಂಟಾಯಿತು. ಅಷ್ಟರಲ್ಲಿ ಸೈನಿಕರು ಬಾಗಿಲು ಬಡಿದಾಗ ಆತ ಶತ್ರುಗಳ ಕಡೆಯವನು ಎನ್ನುವುದು ನಿಶ್ಚಿತವಾಯಿತು. ಆಗ ಮುದುಕಿ ಆತನನ್ನು ತನ್ನ ಸೊಸೆ ಮಲಗಿದ್ದ ಕೋಣೆಯ ಮಂಚದಡಿಯಲ್ಲಿ ಬಚ್ಚಿಟ್ಟು ಮನೆಗೆ ಬಂದ ಸೈನಿಕರಿಗೆ ಈ ಕಡೆ ಯಾರೂ ಬಂದಿಲ್ಲವೆಂದು ಸುಳ್ಳು ಹೇಳಿ ಹೊರ ಕಳುಹಿಸಿ ರಾಹಿಲನ

ಪ್ರಾಣವನ್ನು ಉಳಿಸಿದಳು. ಹಾಗೇ ಒಂದೆರಡು ಪುಟ್ಟ ಹಲಗೆಯ ತುಂಡುಗಳನ್ನು ತಂದುಕೊಟ್ಟು , ಮುರಿದ ಕಾಲನ್ನು ಕಟ್ಟಿಕೊಳ್ಳಲು ರಾಹಿಲನಿಗೆ ಸಹಕರಿಸಿದಳು.

ಅಥವಾ

ಒಮ್ಮೆ ಗ್ರಾಮದ ಜನರೆಲ್ಲ ಸೇರಿ ತಮ್ಮ ಗ್ರಾಮ ದೇವತೆಗೆ ಗುಡಿ ಕಟ್ಟಲು ಆರಂಭಿಸುತ್ತಾರೆ. ಗುಡಿಯ ಕಟ್ಟಡ ಚಾವಣಿಯವರೆಗೆ ಬಂದಾಗ ಇದ್ದಕ್ಕಿದ್ದಂತೆಯೇ ಮಂಚಮ್ಮ ದೇವಿ ಭಕ್ತನೊಬ್ಬನ ಮೇಲೆ ಆವಾಹನೆಯಾಗಿ "ಏನ್ ಮಾಡ್ತಾ ಇದ್ದೀರಿ?" ಎಂದು ಕೇಳುತ್ತಾಳೆ. ಅಲ್ಲಿದ್ದವರು "ನಿನಗೊಂದು ಗುಡಿ ಕಟ್ತಾ ಇದ್ದೇವೆ" ಎಂದು ಹೇಳುತ್ತಾರೆ. ಆಗ "ನಿಮಗೆಲ್ಲಾ ಮನೆ ಇದೆಯಾ?" ಎಂದು ಮಂಚಮ್ಮ ದೇವಿಯು ಕೇಳಿದಾಗ, ಅಲ್ಲಿದ್ದವರಲ್ಲಿ ಒಬ್ಬ "ನನಗಿಲ್ಲ ತಾಯಿ" ಎಂದು ಹೇಳುತ್ತಾನೆ. "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೂ ನನಗೂ ಮನೆ ಬೇಡ" ಎಂದು ಮಂಚಮ್ಮ ದೇವಿಯು ಹೇಳುತ್ತಾಳೆ. ಅಂದಿನಿಂದ ಮಂಚಮ್ಮ 'ಮನೆ ಮಂಚಮ್ಮ' ಎಂದೇ ಪ್ರಸಿದ್ಧಳಾದಳು. ಅಂದಿನಿಂದ ಚಾವಣಿ ಇಲ್ಲದ ಗುಡಿಯಲ್ಲಿ ಪೂಜಿತಳಾಗುತ್ತಿರುವ ಮನೆ ಮಂಚಮ್ಮ ಗ್ರಾಮದ ಜನರನ್ನು ಕಾಪಾಡುತ್ತಿದ್ದಾಳೆ. ಈ ಕಥೆಯನ್ನು ಕವಿ ಸಿದ್ದಲಿಂಗಯ್ಯ ಅವರು ಹೇಳಿದರು.

15. ಈ ಕೆಳಗಿನ ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರಿಸಿ:- **(1x4=4)**

I. ನಮ್ಮ ಸುತ್ತಮುತ್ತಲೂ ಕವಿದಿರುವ ಅಜ್ಞಾನವೆಂಬ ಕತ್ತಲೆಯನ್ನು ಹೋಗಲಾಡಿಸಲು ಪ್ರೀತಿಯೆಂಬ ಹಣತೆಯನ್ನು ಹಚ್ಚಬೇಕಾಗಿದೆ. ಜೀವನದಲ್ಲಿ ಧನಾತ್ಮಕ ಭಾವನೆಯನ್ನು , ದೃಢಸಂಕಲ್ಪವನ್ನು ಹೊಂದಿರಬೇಕು. ಬಿರುಗಾಳಿಗೆ ಹೊಯ್ದಾಡುವ ಬದುಕೆಂಬ ಹಡಗನ್ನು ಬಹು ಎಚ್ಚರಿಕೆಯಿಂದ ನಡೆಸಬೇಕಾಗಿದೆ. ಕಲುಷಿತವಾದ ಪರಿಸರವನ್ನು ಮುಂಗಾರಿನ ಮಳೆಯಂತೆ ಶುದ್ಧಗೊಳಿಸಿ ವಸಂತಕಾಲವಾಗಿಸಬೇಕು. ವನಸಂರಕ್ಷಣೆಯ ಸಂಕಲ್ಪ ಕೈಗೊಳ್ಳುವುದರಿಂದ ಕಾಡುಗಳು ಹಚ್ಚಹಸುರಿನಿಂದ ಸಮೃದ್ಧವಾಗುವಂತೆ ಮಾಡಬಹುದು. ನಾವು ಹೊಸ ಭರವಸೆಯನ್ನು ಮೂಡಿಸುವ ಸಂಕಲ್ಪದಿಂದ ಸಮಾಜದ ನೈತಿಕ ಅಧಃಪತನವನ್ನು ತಡೆಯಬಹುದು. ಮನುಷ್ಯರ ನಡುವಿನ ಅಡ್ಡ ಗೋಡೆಗಳನ್ನು ತೊಡೆದು ಹಾಕಿ ಪ್ರೀತಿಯೆಂಬ ಹಣತೆಯ ಮೂಲಕ ಸೇತುವೆಯನ್ನು ನಿರ್ಮಿಸಬೇಕು. ಮತ-ಧರ್ಮಗಳೆಲ್ಲವೂ ಕೇವಲ ಮುಕ್ತಿ ಮಾರ್ಗಗಳೆಂದು ತಿಳಿದು ಎಚ್ಚರದಲ್ಲಿ ಬದುಕುವ ಸಂಕಲ್ಪ ಕೈಗೊಳ್ಳಬೇಕು. ಭಯ ಮತ್ತು ಸಂಶಯಗಳಿಂದ ಮುಕ್ತರಾಗುವ ಸಂಕಲ್ಪ ಕೈಗೊಳ್ಳುವುದರಿಂದ ಭವಿಷ್ಯದ ಕನಸ್ಸನ್ನು ಕಾಣುತ್ತಾ , ಹೊಸ ಭರವಸೆಗಳೊಂದಿಗೆ ಬದುಕನ್ನು ಮುನ್ನಡೆಸಬೇಕು ಎಂದು ಕವಿ ಶಿವರುದ್ರಪ್ಪನವರು ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ.

ಅಥವಾ

ಲವನು ವೀರಬಾಲಕನಾಗಿದ್ದರೂ ಸ್ವಾಭಿಮಾನಿಯಾಗಿದ್ದ . ವಾಲ್ಮೀಕಿ ಮುನಿಗಳು ತನಗೆ ನೀಡಿದ್ದ ಆಶ್ರಮದ ಉದ್ಯಾನವನದ ಜವಾಬ್ದಾರಿಯ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದ . ರಾಮನ ಯಜ್ಞಾಶ್ವವು ಉದ್ಯಾನವನದ ಒಳಹೊಕ್ಕಿ ಅದನ್ನು ಹಾಳು ಮಾಡುತ್ತಿರುವುದನ್ನು ಕಂಡು ಅದನ್ನು ಓಡಿಸಲು ಮುಂದಾದನು. ಆಗ ಅಶ್ವದ ಹಣೆಯಲ್ಲಿದ್ದ ಪಟ್ಟಿಯ ಲಿಖಿತವನ್ನು ಓದಿ 'ರಾಮನೊಬ್ಬನೆ ಭೂಮಂಡಲದಲ್ಲಿ ವೀರನೇ, ಜಾನಕಿಯ ಮಗನಾದ ತನ್ನಲ್ಲಿ ಪರಾಕ್ರಮವಿಲ್ಲವೇ? ಎಂದು ಯೋಚಿಸಿ, ತನ್ನ ಉತ್ತರೀಯದಿಂದ ಕುದುರೆಯನ್ನು ಕಟ್ಟಿಹಾಕಿದನು. ಆತನ ಸಂಗಡಿಗರು ಎಷ್ಟೇ ವಿರೋಧಿಸಿದರೂ ಅವರ ಮಾತನ್ನು ಕೇಳದೇ ತಾನೊಬ್ಬನೇ ಏಕಾಂಗಿಯಾಗಿ ಹೋರಾಡಲು ನಿರ್ಧರಿಸಿದನು. ಲವನಲ್ಲಿ ಕಂಡುಬರುವ 'ಪರಾಕ್ರಮ, ಸ್ವಾಭಿಮಾನ ಮತ್ತು ಸಂದರ್ಭಕ್ಕೆ ತಕ್ಕಂತೆ ಕೈಗೊಂಡ ನಿರ್ಧಾರ ಹಾಗೂ ಕ್ಷತ್ರಿಯನಿಗೆ ಇರಬೇಕಾದ ನಿರ್ಭಯತೆ' ಈ ಗುಣಗಳು ನಮ್ಮ ಮೆಚ್ಚಿಗೆಗೆ ಪಾತ್ರವಾಗುತ್ತವೆ.

****